**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:-** ಒಂದು ಸಿಕ್ಕಿದೆ. ಒಂದು ಮರ ಹತ್ತಿಬಿಟ್ಟಿತ್ತು.

**ಉಪಾಧ್ಯಕ್ಷರು:-** ಈಗ ಪ್ರತಾಪಚಂದ್ರ ಶೆಟ್ಟಿಯವರು.

**ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ:-** ವಾಟಾಳ್ ನಾಗರಾಜರನ್ನು ಮುಟ್ಟತಕ್ಕ ಧೈರ್ಯ ಹುಲಿ, ಚಿರತೆಗೆ ಇಲ್ಲ. ಅದರ ಬಗ್ಗೆ ಆತಂಕವೇ ಬೇಡ.

**(ಒ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಗೆ ಆಗಿರುವ ತೊಂದರೆ.**

**+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):-** ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಾಗಿರತಕ್ಕ ಮೀನುಗಾರಿಕೆ ರಸ್ತೆ ಕೊಚ್ಚಿಹೋಗತಕ್ಕಂಥ ಭೀತಿ ಇದೆ. ಕುಂದಾಪುರ ತಾಲ್ಲೂಕಿನ ಗೋಪಾಡಿ ಬೀಜಾಡಿ, ಮತ್ತು ಕುಂದಾಪುರ ಪುರಸಭೆ ವ್ಯಾಪ್ತಿಯ ಯಂಕೋಡಿ, ಸುರತ್ಕಲ್ ಮತ್ತು ಕಾಪು ಕ್ಷೇತ್ರಗಳಲ್ಲಿ ಸಮುದ್ರ ಕೊರೆತ ಪ್ರಾರಂಭವಾಗಿದೆ. ಅದಕ್ಕೆ ತಕ್ಷಣ ಸರ್ಕಾರ ಮಧ್ಯ ಪ್ರವೇಶಿಸಿ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಲಿಕ್ಕೆ ಸಣ್ಣ ನೀರಾವರಿ ಸಚಿವರು ಪ್ರಯತ್ನ ಮಾಡಬೇಕು. ಏಕೆಂದರೆ ಎಲ್ಲಾ ಕೊಚ್ಚಿಹೋದ-ಮೇಲೆ ಮತ್ತೆ ತಾವು ಎಲ್ಲಾ ಇನ್‌ಸ್ಪೆಕ್ಷನ್ ಮಾಡಿ ತಾವು ಹೋಗಿ ತಡೆಗೋಡೆ ಕಟ್ಟುವುದರೊಳಗೆ ರಸ್ತೆ ಹೋಗುತ್ತದೆ; ಮನೆ ಹೋಗುತ್ತದೆ; ತೋಟ ಹೋಗುತ್ತದೆ; ಗದ್ದೆ ಹೋಗುತ್ತದೆ. ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮುಂಚೆ ಜಿಲ್ಲಾಧಿಕಾರಿಯವರು ಸ್ಥಳ ಸಂದರ್ಶನ ಮಾಡಿ ಅವಶ್ಯಕತೆ ಇದ್ದಲ್ಲಿ ಅದನ್ನು ತಾತ್ಕಾಲಿಕ ತಡೆಗೋಡೆ ಕಟ್ಟತಕ್ಕಂಥ ಪ್ರಯತ್ನ ಮಾಡುತ್ತಿದ್ದರು. ಮೊನ್ನೆ ಇಂಥ ಪರಿಸ್ಥಿತಿ ಬಂದಾಗ ನಾನು ಜಿಲ್ಲಾಧಿಕಾರಿಯವರ ಕಛೇರಿಗೆ ಸಂಪರ್ಕ ಮಾಡಿದಾಗ ಸಣ್ಣ ನೀರಾವರಿ ಇಲಾಖೆ-ಯವರಿಗೆ ಹೇಳಬೇಕು ಎನ್ನತಕ್ಕ ಮಾತನ್ನು ಹೇಳಿದರು. ಬಹುಶಃ ಸಣ್ಣ ನೀರಾವರಿ ಅಧಿಕಾರಿಗಳು ಭೇಟಿ ಕೊಟ್ಟರು. ಆದರೆ ಅದರ ಬಗ್ಗೆ ಪರಿಹಾರ ಕೊಡತಕ್ಕ ಪ್ರಯತ್ನ ಮಾಡಲಿಲ್ಲ. ಬಹುಶಃ ಅವರಿಗೆ ಅಧಿಕಾರ ಇಲ್ಲದೇ ಇರಬಹುದು. ತಾವು ಸಹ ಹೋಗಬಹುದಿತ್ತು. ತಾವು ಸಹ ಹೋಗಲಿಲ್ಲ. ಆದ್ದರಿಂದ ಇದರ ಬಗ್ಗೆ ವಿಶೇಷವಾಗಿ ಗಮನ ಹರಿಸಿ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಿ ರಸ್ತೆಗಳು ಮನೆಗಳನ್ನು ಉಳಿಸತಕ್ಕ ಕೆಲಸ ಮಾಡಬೇಕು. ಮತ್ತು ಕೇಂದ್ರಸರ್ಕಾರದಿಂದ ಕೇರಳದಲ್ಲಿ ಏನು ಶಾಶ್ವತ ತಡೆಗೋಡೆಗೋಸ್ಕರ ಅನುದಾನವನ್ನು ಕೊಡುತ್ತಾ ಇದ್ದಾರೆ ಅದೇ ರೀತಿ ಇಲ್ಲೂ ಸಹ ಶಾಶ್ವತ ತಡೆ-ಗೋಡೆಯನ್ನು ಕಟ್ಟತಕ್ಕ ಪ್ರಯತ್ನವನ್ನು ಮಾಡಬೇಕು. ತಕ್ಷಣ ಈ ಸಮುದ್ರ ಕೊರೆತವನ್ನು ನಿಲ್ಲಿಸಲಿಕ್ಕೆ ತಮ್ಮ ವ್ಯಾಪ್ತಿಯಲ್ಲಿ ಏನು ಮಾಡುವುದಕ್ಕಾಗುತ್ತದೆ, ಏನು ಮಾಡುತ್ತೀರಿ ಎನ್ನತಕ್ಕ ಸ್ಪಷ್ಟ ಆಶ್ವಾಸನೆ-ಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಜನರಿಗೆ ಕೊಡಬೇಕು ಎನ್ನತಕ್ಕ ಮಾತನ್ನು ಸನ್ಮಾನ್ಯ ಉಪಾಧ್ಯಕ್ಷರ ಮುಖಾಂತರ ಸನ್ಮಾನ್ಯ ಸಚಿವರ ಹತ್ತಿರ ಹೇಳುತ್ತೇನೆ.

**ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು):-** ಮಾನ್ಯ ಉಪಾಧ್ಯಕ್ಷರೇ ಈ ಸಮುದ್ರ ಕೊರೆತ ಆಗುತ್ತಾ ಇರುತ್ತದೆ. ಇದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿಯಿಲ್ಲ. ಮಾನ್ಯ ಸದಸ್ಯರು ಹೇಳಿರತಕ್ಕ ಮಾತು ಸತ್ಯವಿರಬಹುದು. ಈಗ ನಾವು ಅರ್ಜೆಂಟಾಗಿ ಹೋಗಿ ನೋಡಿ, ಅರ್ಜೆಂಟಾಗಿ ಮಾಡುವಂತಹ ಕೆಲಸಗಳಲ್ಲ ಇವು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಅರ್ಜೆಂಟಾಗಿ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ.

**ಉಪಾಧ್ಯಕ್ಷರು:-** ಅವರು ಉತ್ತರ ಮುಗಿಸಿದ ಮೇಲೆ ತಾವು ಪ್ರಶ್ನೆ ಕೇಳಿ.

**ಶ್ರೀ ತಿಪ್ಪೇಸ್ವಾಮಿ:-** ಸಮುದ್ರ ಹುಟ್ಟಿ ಸಾಕಷ್ಟು ಶತಮಾನಗಳು ಕಳೆದು ಇಲ್ಲಿಯವರೆಗೂ ಆಗದಿರತಕ್ಕ ಕೆಲಸವನ್ನು ಮಾನ್ಯ ಸದಸ್ಯರು ಎತ್ತಿದ ತಕ್ಷಣ ಅದನ್ನು ತೆಗೆದುಕೊಂಡು ಹೋಗಿ ಮಂತ್ರ ಮಾಡತಕ್ಕ ಕೆಲಸ ಅಲ್ಲ ಸ್ವಾಮಿ. ಅದನ್ನು ನೋಡಿ ಎಸ್ಟಿಮೇಟ್ ಮಾಡ ಬೇಕಾಗುತ್ತದೆ. ಈ ಆರ್ಥಿಕ ವ್ಯವಸ್ಥೆಯಲ್ಲಿ ಅದಕ್ಕೆ ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ಆಗುತ್ತೊ ಇಲ್ಲವೊ ಎನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇಂತಹವನ್ನೆಲ್ಲ ಇಟ್ಟುಕೊಂಡು ಮಾನ್ಯ ಸದಸ್ಯರು ಹೇಳಿದ ತಕ್ಷಣ, ನಾನು ಮಾನವೀಯತೆಯ ದೃಷ್ಟಿಯಿಂದ ಏನು ಕೆಲಸ ಮಾಡುವುದಕ್ಕೆ ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತೇನೆ. ಅದಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ನಾನು ಮಂತ್ರ ಮಾಡಿಯೆಂದು ಹೇಳುತ್ತಿಲ್ಲ. ತಮಗೆ ಕಾಳಜಿ ಇರಬೇಕು. ತಾವು ಸ್ಥಳಪರಿಶೀಲನೆ ಮಾಡಿ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಬೇಕು. ಮುಂಚೆ ಏನು ಮಾಡುತ್ತಿದ್ದರು ಅಂದರೆ ಬೈಗೆ ಚೀಲ ಕಲ್ಲು ಇದನ್ನು ಹಾಕಿ ತಾತ್ಕಾಲಿಕ ತಡೆಗೋಡೆ ನಿರ್ಮಾಣ ಮಾಡುತ್ತಿದ್ದರು. ರಸ್ತೆಗಳೆಲ್ಲ ಕೊಚ್ಚಿಹೋಗುವ ಸಾಧ್ಯತೆಯಿದೆ. ಮುಂದೆ ಮಾಡಬೇಕೆಂದು ನಾನು ಹೇಳುತ್ತಿಲ್ಲ, ನೀವು ಅದರ ಬಗ್ಗೆ ಗಮನಹರಿಸಿ.

**ಶ್ರೀ ತಿಪ್ಪೇಸ್ವಾಮಿ:-** ಆಯಿತು, ಅಧಿಕಾರಿಗಳಿಗೆ ಅದಷ್ಟು ಜಾಗ್ರತೆ ಏನು ಕೆಲಸ ಮಾಡಬಹುದೊ ಅದನ್ನು ಮಾಡಲಿಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

(ಓ) ಕುಂದಾಪುರ ತಾಲ್ಲೂಕಿನಲ್ಲಿ ಬಗರ್‌ಹುಕ್ಕುಂ ಸಾಗುವಳಿ ಸಮಿತಿ.

**+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ್):-** ನಮ್ಮ ಕುಂದಾಪುರ ತಾಲ್ಲೂಕಿನ ಭೂಸಕ್ರಮಣ ಸಮಿತಿಯ ಅಧ್ಯಕ್ಷರು ನನ್ನನ್ನು ಹಾಗೂ ಒಂದೇ ಕೋಮಿನ ನಾಲ್ಕು ಜನ ಭೂಮಾಲೀಕರನ್ನು ಸದಸ್ಯರಾಗಿ ಮಾಡಿ ಜೊತೆಗೆ ಪರಿಶಿಷ್ಟವರ್ಗದ ಮಹಿಳೆಯನ್ನು ಸಹ ಸದಸ್ಯರನ್ನಾಗಿ ಮಾಡಿ ಸಾವಿರಾರು ಬಡ ಜನರ ಅರ್ಜಿಗಳು ತಾಲ್ಲೂಕು ಆಫೀಸಿನಲ್ಲಿದ್ದು ಇವತ್ತು ಅವುಗಳನ್ನು ಇತ್ಯರ್ಥ ಮಾಡಲಿಕ್ಕೆ ಸಾಧ್ಯವಾಗದೆ ಮೂರು ಸಲ ಕಂಟಿನ್ಯುಯಸ್ ಕೋರಂಗೆ ನೇಮಕಾತಿಯ ಸದಸ್ಯರು ಗೈರು ಹಾಜರಿಯಾಗಿ ಅವರಿಗೆ ಭೂವಿತರಣೆ ಮಾಡಲಿಕ್ಕೆ ಅಡೆತಡೆಯಾಗಿದೆ. ಇದರಲ್ಲಿ ನಿಜವಾಗಿಯೂ ಇವರು ಆಟ-

ವಾಡುತ್ತಿದ್ದಾರೆ. ಏಕೆಂದರೆ ಇದು ಬಡ ಜನರ ಕಾರ್ಯಕ್ರಮವಾಗಿರುವುದರಿಂದ ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳುವುದೇನೆಂದರೆ, ಇದರಲ್ಲಿ ಯಾವುದೇ ರಾಜಕೀಯ ಮಾಡದೆ ಇದರಲ್ಲಿ ಬಡಜನರಿಗೆ ಸಿಗುವಂತಹ ಸವಲತ್ತು ಸಿಕ್ಕಿ ಏಕೆಂದರೆ ಇದು ಎಷ್ಟೋ ವರ್ಷಗಳಿಂದ ಇದ್ದಂತಹ ಒಂದು ಸಮಸ್ಯೆ, ಸಾಧಾರಣ ಇವತ್ತು 10 ಸಾವಿರದ ತನಕ ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಇತ್ಯರ್ಥವಾಗದೆ ಇವೆ, ಅಂತಹ ಸಂದರ್ಭದಲ್ಲಿ ಈ ಬಡ ಜನರನ್ನು ಶೋಷಿತ ಮಾಡುವಂತಹ ಒಂದು ನಾಟಕ ಮಾಡುವಂತಹ ಕೆಲಸವನ್ನು ಮಾಡದೆ ಅದು ಕಾರ್ಯರೂಪವಾಗಿ, ಲಭಿಸುವಂತೆ ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅದು ಅಲ್ಲದೆ ನಾನು ಮಾನ್ಯ ಕಂದಾಯ ಸಚಿವರಿಗೆ ಕಾಗದವನ್ನು ಬರೆದರೂ, ಆ ಕಾಗದಕ್ಕೆ ಉತ್ತರವನ್ನು ಕೊಡದೆ ಅವರು ಸಹ ನನ್ನನ್ನೆ ನೀವು ಕೆಲವು ಮೀಟಿಂಗ್‌ಗೆ ಬರಲಿಲ್ಲವೆಂದು ಹೇಳುತ್ತಾರೆ. ಅಂತಹ ಸಂದರ್ಭದಲ್ಲಿ ನಾನೇ ಬರದಿದ್ದರೆ ನನ್ನ ಮೇಲೆ ಕ್ರಮ ತೆಗೆದುಕೊಂಡು ನನ್ನನ್ನೆ ತೆಗೆದುಹಾಕಿ, ಬೇರೆ ಸಮಿತಿ ಮಾಡಿಯೆಂದು ಅವರ ಹತ್ತಿರ ಹೇಳಿದ್ದೇನೆ. ಏಕೆಂದರೆ ಇವತ್ತು ನನಗೆ ಬೈಂದೂರು ಕ್ಷೇತ್ರದಲ್ಲಿ ಯಾವುದೇ ಕಾರ್ಯಕ್ರಮವನ್ನು ಜನರಿಗೆ ಮುಟ್ಟಿಸುವಂತಹ ಕೆಲಸ ಮಾಡಲಿಕ್ಕೆ ಇವತ್ತು ಆಗುತ್ತಿಲ್ಲ. ಅದಕ್ಕೆ ಅಧಿಕಾರಿಗಳ ಸಹಕಾರವಿಲ್ಲ. ರಾಜಕಾರಿಣಿಗಳ ರಾಜಕೀಯ ನಾಟಕ, ಅದರೊಟ್ಟಿಗೆ ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳು ಸೇರಿ ಎಲ್ಲ ಯೋಜನೆಗಳನ್ನು ಇವತ್ತು ಜನರಿಗೆ ಮುಟ್ಟಿಸದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೈಂದೂರು ಬಹಳಷ್ಟು ಹಿಂದುಳಿದಿದೆ. ಜನರಿಗೆ ಮೂಲಭೂತ ಸೌಕರ್ಯ ಗಳು ಸಿಗದೆ ಜನರು ವಂಚಿತರಾಗಿದ್ದಾರೆ. ಇದನ್ನು ಕೇಳುವವರು ಇಲ್ಲದಂತಹ ಪರಿಸ್ಥಿತಿಯಾಗಿದೆ. ನಾನು ತಮ್ಮ ಮೂಲಕ ಕೇಳಿಕೊಳ್ಳುವುದು ಇನ್ನು ಮುಂದೆಯಾದರೂ ಬೈಂದೂರು ಕ್ಷೇತ್ರಕ್ಕೆ ನ್ಯಾಯ ಒದಗಿಸಿ ಬಡಜನರಿಗೆ ಸಿಗುವಂತಹ ಯೋಜನೆಗಳು ಬಡಜನರಿಗೆ ಮುಟ್ಟುವಂತಹ ಒಂದು ಅವಕಾಶ- ವನ್ನು ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದು ಅಲ್ಲದೆ ನಾನು ಮೂರು ಮೀಟಿಂಗ್ ಕರೆದು ಮೂರು ಮಿಟಿಂಗ್‌ನಲ್ಲಿ ಕೋರಂ ಇಲ್ಲದೆ ಈಗ ನಾನು ನಾಲ್ಕನೇ ಮೀಟಿಂಗನ್ನು ಹೇಗೆ ಕರೆಯಲಿ? ಅಲ್ಲಿಯ ಅಧಿಕಾರಿಗಳು ನನ್ನನ್ನು ನೋಡಿ ನಗುತ್ತಾರೆ. ಅಲ್ಲಿನ ಬಡ ಜನರು 20-25 ಕಿಲೋಮೀಟರ್ ದೂರದಿಂದ ಬಹಳ ಕಷ್ಟದಿಂದ ಬಂದವರು ಇಡೀ ದಿವಸವನ್ನು ಹಾಳು ಮಾಡಿಕೊಂಡು ಪುನ: ವಾಪಸ್ಸು ಹೋಗಿ, ಇಂತಹ ಸಂದರ್ಭಗಳು ಆಗುತ್ತಿರುವ ಇದರಲ್ಲಿ ನಾನು ಒಬ್ಬ ಶಾಸಕನಾಗಿ, ಆ ಸಮಿತಿಯ ಅಧ್ಯಕ್ಷನಾಗಿ ಯಾವ ರೀತಿಯಲ್ಲಿ ಜನರ ಸೇವೆ ಮಾಡಬೇಕೆಂದು ತಾವು ನನಗೆ ಮಾಹಿತಿಯನ್ನು ಕೊಟ್ಟಲ್ಲಿ ಅಥವಾ ಮಾರ್ಗದರ್ಶನ ಕೊಟ್ಟಲ್ಲಿ ಅನುಕೂಲವಾಗುತ್ತದೆ. ನಿಜವಾಗಿ ಅಲ್ಲಿ ಜನರ ಸೇವೆ ಮಾಡುವಲ್ಲಿ ಪ್ರಾಮಾಣಿಕವಾಗಿ ಅವಕಾಶವಿಲ್ಲ. ತಾವು ಇದರ ಮಧ್ಯೆ ಪ್ರವೇಶಿಸಿ, ನೀವೇ ಮಾರ್ಗದರ್ಶನ ಮಾಡಿ ಸರ್ಕಾರದ ಯೋಜನೆ ಬಡ ಜನರಿಗೆ ಕೇವಲ ಪೇಪರ್‌ನಲ್ಲಿ ಆಗದೆ ಬಡ ಜನರಿಗೆ ಕಾರ್ಯರೂಪದಲ್ಲಿ ಮುಟ್ಟುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಇನ್ನೊಮ್ಮೆ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

**ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-** ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರವನ್ನು ಹುಡುಕತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ತಮ್ಮ ಬಗ್ಗೆ ನಾವು ಆಸ್ಥಾನದಲ್ಲಿ ಕುಳಿತು ಕೆಲಸ ಮಾಡವಂತಹ ಸಂದರ್ಭದಲ್ಲಿ ನಾವು ಗೌರವ ಕೊಟ್ಟು ಕೆಲಸ ಮಾಡುವಂಥದ್ದನ್ನು ತಾವು ನೋಡುತ್ತಿದ್ದೀರಿ. ತಮ್ಮ ಮಾತಿಗೆ ಇಲ್ಲಿ ಯಾರೂ ಏನು ಬೇರೆ ಮಾತನಾಡುವ ಪ್ರಶ್ನೆಯಿಲ್ಲ. ತಾವು ದಯಮಾಡಿ ಇಲ್ಲಿ ಯಾವುದೇ ಶಾಸಕರು ಯಾವುದೇ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದರೆ ಏನೋ ಒಂದು ಭಿನ್ನಹ ತಮ್ಮಲ್ಲಿ ಇಟ್ಟುಕೊಳ್ಳುವಂತಹದ್ದು ತಾವು ಪರಿಶೀಲನೆ ಮಾಡುತ್ತೇವೆಂದು ಹೇಳತಕ್ಕದ್ದಲ್ಲ. ಇವತ್ತು ಇಲ್ಲಿ ಮಾನ್ಯ ನಾಣಯ್ಯನವರು ಹಿರಿಯ ಸಚಿವರು ಇದ್ದಾರೆ. ಸಿಂಧ್ಯಾರವರು ಇದ್ದಾರೆ ಮಾನ್ಯ ಸದಸ್ಯರು ಏನು ಹೇಳಿದರು? ಒಬ್ಬ ಶಾಸಕನಾಗಿ ನಾನು ಕೆಲಸ ಮಾಡುವುದಕ್ಕಾಗುತ್ತಿಲ್ಲ. ಅಕ್ರಮ ಸಕ್ರಮ ಸಮಿತಿಯ ಸದಸ್ಯರನ್ನಾಗಿ ಯಾರು ಬೇಕಾದರೂ ಮಾಡಿ ನಿಮಗೆ ಸ್ವಾತಂತ್ರ್ಯವಿದೆ ನಿಮ್ಮ ಸರ್ಕಾರ ಇದೆ, ಆದರೆ ಕಳೆದ ಮೂರು ಮೀಟಿಂಗ್ ಕರೆದಾಗಲೂ ಆ ಮೀಟಿಂಗ್‌ಗೆ ಅವರು ಬರಲಿಲ್ಲ. ಬರದಿರುವುದರಿಂದ ನಾನು ಒಬ್ಬ ಶಾಸಕನಾಗಿ ಈ ಸಮಿತಿಯ ಅಧ್ಯಕ್ಷನಾಗಿ ನಾನು ನನ್ನ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ಒಂದು ಅಪಹಾಸ್ಯಕ್ಕೆ ಈಡಾಗುತ್ತಿದ್ದೇನೆ ಅಂತ ಅವರು ಹೇಳುತ್ತಿದ್ದಾರೆ. ಅವರು ಮುಂದಿನ ಮೀಟಿಂಗ್ ಕರೆಯತ್ತಾರೆ. ಆ ಮೀಟಿಂಗ್‌ಗೆ ಅವರು ಹೋಗುವಂತಹ ವ್ಯವಸ್ಥೆಯನ್ನು ಮಾಡಿ. ಅವರು ಉದ್ದೇಶಪೂರ್ವಕವಾಗಿ ಆ ಮೀಟಿಂಗ್‌ಗೆ ಹೋಗದೆ ನಮ್ಮ ಶಾಸಕರು ಕೆಲಸ ಮಾಡಬಾರದೆನ್ನುವ ಉದ್ದೇಶವಿದ್ದರೆ, ಇವರೇ ರಾಜೀನಾಮೆಯನ್ನು ಕೊಡುತ್ತಾರೆ ಬೇಕಾದರೆ ತೆಗೆದುಕೊಳ್ಳಿ, ಮಾನ್ಯ ಬೈರೇಗೌಡರಾಗಲಿ ಸಿಂಧ್ಯಾರಾಗಲಿ ಸಚಿವರಾಗದೆ ಶಾಸಕರಾಗಿ ಇಲ್ಲಿ ಕುಳಿತಿದ್ದರೆ ತಾವು ಏನು ಮಾಡುತ್ತಿದ್ದಿರಿ? ದಯಮಾಡಿ ಆ ಸ್ಪಿರಿಟ್‌ನಲ್ಲಿ ತೆಗೆದುಕೊಳ್ಳಿ. ಅಲ್ಲಿ ತಾಲ್ಲೂಕಿನ ಕೆಲಸ ಆಗಬೇಕಾಗಿದೆ. ಅವರು ಶಾಸಕರಾಗಿ ತಮ್ಮ ಕರ್ತವ್ಯ ನಿರ್ವಹಿಸಬೇಕಾಗಿದೆ. ದಯಮಾಡಿ ಇದನ್ನು ಸೀರಿಯಸ್ಸಾಗಿ ತೆಗೆದುಕೊಂಡು ಇದರ ಬಗ್ಗೆ ಗಮನಕೊಡಿ.

**ಶ್ರೀ. ಸಿ. ಬೈರೇಗೌಡ:-** ಮಾನ್ಯ ಉಪಾಧ್ಯಕ್ಷರೆ ಸ್ಥಳದಲ್ಲಿ ಏನು ವಿದ್ಯಾಮಾನ ಇದೆ ಎನ್ನತಕ್ಕದ್ದನ್ನು ತತ್‌ಕ್ಷಣದಲ್ಲಿ ಹೇಳುವುದು ಕಷ್ಟವಿದೆ. ಆದರೆ ಅಲ್ಲಿ ಉದ್ದೇಶಪೂರ್ವಕವಾಗಿ ನಾಮನಿರ್ದೇಶನ ಹೊಂದಿದಂತಹ ಸದಸ್ಯರು ಸಮಿತಿಯಲ್ಲಿ ಕೆಲಸ ಮಾಡದಿದ್ದರೆ ಅಂತಹವರನ್ನು ತೆಗೆಯಬೇಕಾಗಿರತಕ್ಕದ್ದು ಅತ್ಯಾವಶ್ಯಕ. ಅದು ಯಾವುದೇ ಕ್ಷೇತ್ರವಿರಬಹುದು ಅಥವಾ ಯಾವುದೇ ತಾಲ್ಲೂಕು ಆಗಲಿ ಅಭಿವೃದ್ಧಿ ಕಾರ್ಯಕ್ರಮದ ಕೆಲಸಗಳು ಜನರಿಗೆ ಆಗಬೇಕಾಗಿರತಕ್ಕ ಸೌಕರ್ಯ ಅದು ಆಗಬೇಕಾಗುತ್ತದೆ. ಯಾರೇ ಶಾಸಕರು ಇರಲಿ, ಯಾವ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕವರು ಶಾಸಕರು ಆಗಿರಲಿ ಆಲ್ಲಿ ನಮಗೆ ರಾಜ್ಯದ ಸಮಗ್ರ ಅಭಿವೃದ್ಧಿ ಮುಖ್ಯ. ಈ ಶಾಸಕರು ಆ ಶಾಸಕರು ಆ ಮುಖಂಡರು ಈ